## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಡಗಲಿ ಗ್ರಾಮ ಪಂಚಾಯತ್, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 240 ಗ್ರಾಪಂಕಾ 2016 ದಿನಾಂಕ:11–05–2016.
2. ಅಪರ ನಿಬಂಧಕರು ವಿಚಾರಣೆಗಳು – 9, ಇವರ ಪತ್ರ ಸಂಖ್ಯೆ: ಉಪಲೋಕ್–1/ಡಿಇ/170/ 2016/ಎಆರ್‌ಇ–9, ದಿನಾಂಕ: 16.03.2019
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಉಪಲೋಕ್–1/ಡಿಇ/170/ 2016/ಎಆರ್‌ಇ–9, ದಿನಾಂಕ:19–03–2019.
4. ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಸಂಖ್ಯೆ: ಉಪಲೋಕ್–1/ಡಿಇ/170/ 2016/ಎಆರ್‌ಇ–9, ದಿನಾಂಕ:19–03–2019.
5. ಸರ್ಕಾರದ ಸಮ ಸಂಖ್ಯೆಯ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:12–04–2019.
6. ನೌಕರರು ಸಲ್ಲಿಸಿದ ಲಿಖಿತ ಹೇಳಿಕೆ ದಿನಾಂಕ:16–05–2019

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿನ ಸರ್ಕಾರದ ಆದೇಶದಲ್ಲಿ ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಡಗಲಿ ಗ್ರಾಮ ಪಂಚಾಯತ್, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ವಿರುದ್ಧ ಕರ್ತವ್ಯಲೋಪದ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ ಇವರು ಶ್ರೀ ಶಿರಗುಪ್ಪಿ ಜಿ.ಎಸ್, ರವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**ದೋಷಾರೋಪಣೆ"**

## CHARGE

2. That, you Shri. Shiraguppi. G.S., while working as Panchayath Development Officer, Hirekodagali grama Panchayath, Hunagunda Taluk, Bagalkote District;

(i) Failed to take any action to stop Shri. Prabhugowda Patila from encroaching over the public road while constructing his house in property No.90, situated at ward no.1, Mallammana oni at Hirekodagli Village, Hunagund Taluk, Bagalkot District and

(ii) failed to take any action to remove the said encroachment made by Sri. Prabhugowda Patila even after completion of the said construction, and thereby you DGO have failed to maintain absolute

integrity and devotion to duty, the act of which is un-becoming of Government Servant and thereby conmmitted mis-conduct as enumerated U/R 3(1)(i) to (iii) of Karnataka Civil Service (Conduct) Rules 1966.

ವಿಚಾರಣಾಧಿಕಾರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿರುವುದಾಗಿ ನಿರ್ಣಯಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಸಾಬೀತಾದ ಅರೋಪಕ್ಕೆ ಅನುಗುಣವಾಗಿ ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರಡಿ ನಿರ್ದಿಷ್ಟಪಡಿಸಿದಂತೆ **"ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿನ ಸರ್ಕಾರದ ಪತ್ರದಲ್ಲಿ ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರಿಗೆ ನಿಯಮಾನುಸಾರ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಆಪಾದಿತ ನೌಕರರು ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸಿಗೆ ಕೆಳಗಿನಂತೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

1. ದೂರುದಾರರಾದ ಶ್ರೀ. ವೀರಭದ್ರಗೌಡ ಬಸನಗೌಡ ಪಾಟೀಲ ರವರು ಸಲ್ಲಿಸಿರುವ ದೂರು ಸುಳ್ಳಾಗಿದ್ದು, ರಾಜಕೀಯ ಉದ್ದೇಶದಿಂದ ಕೂಡಿದೆ. ದೂರುದಾರರು ತಮ್ಮ ದಿನಾಂಕ:15-09-2012ರ ದೂರಿನಲ್ಲಿ ನನ್ನ ವಿರುದ್ಧ ಯಾವುದೇ ಆಪಾದನೆ ಮಾಡದೇ ದಿನಾಂಕ:30-06-2016ರ ದೂರಿನಲ್ಲಿ ಒಂದುವರೆ ವರ್ಷದ ನಂತರ ನನ್ನ ವಿರುದ್ಧ ಆಪಾದನೆ ಮಾಡಿರುತ್ತಾರೆ.
2. ಹಿರೇಕೊಡಗಲಿ ಗ್ರಾಮ ಪಂಚಾಯಿತಿಯ ಸದಸ್ಯರುಗಳು ದಿನಾಂಕ:27-07-2012 ರಂದು ಹಿರೇಕೊಡಗಲಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿ, ಮಲ್ಲಮ್ಮನ ಓಣಿ ಹತ್ತಿರ ಇರುವ ವಿದ್ಯುತ್ ಕಂಬವು ಯಾವುದೇ ಪರಿಸ್ಥಿತಿಯಲ್ಲಿ ಬೀಳುವ ಹಂತದಲ್ಲಿದ್ದು, ಇದರಿಂದ ಜನರಿಗೆ ಅನಾನುಕೂಲ ಆಗಿದೆ, ಅದನ್ನು ಕಿತ್ತುಹಾಕಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಸದರಿ ವಿಷಯವನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ದಿನಾಂಕ:28-07-2012 ರಂದು ಚರ್ಚಿಸಲಾಗಿ ಸಭೆಯು ಕಂಬವನ್ನು ಕಿತ್ತು ತೆಗೆಯಿಸಲು ಶಾಖಾಧಿಕಾರಿಗಳು, ಹುಬ್ಬಳ್ಳಿ ವಿದ್ಯುತ್ ರವರಿಗೆ ಸ.ಕಂ.ನಿ, ಇಲಕಲ್ಲಿ ರವರಿಗೆ ಪತ್ರ ಬರೆಯಲು ಹೇಳಿ ಸಭೆಯು ಸರ್ವಾನುಮತದಿಂದ ಠರಾವು ಪಾಸು ಮಾಡಿತು. ಈ ಕುರಿತು ಕಂಬವನ್ನು ಕಿತ್ತು ಬೇರೆ ಕಡೆ ಹಾಕಲು ಶಾಖಾಧಿಕಾರಿಗಳು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ನಿಯಮಿತ ರವರಿಗೆ ದಿನಾಂಕ:07-09-2012 ರಂದು ಪತ್ರ ಮುಖಾಂತರ ವಿನಂತಿಸಿಕೊಳ್ಳಲಾಯಿತು. ಸದರಿ ಪತ್ರದ ಪ್ರಕಾರ ಇಲಾಖೆಯವರು ಕಂಬವನ್ನು ಕಿತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿರುತ್ತಾರೆ.
3. ಶ್ರೀ. ಪ್ರಭುಗೌಡ ನಿಂಗನಗೌಡ ಪಾಟೀಲ ರವರು ಎಸ್ಕಾಂ ಇಲಾಖೆಯ ವಿರುದ್ಧವಾಗಿ ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹುನಗುಂದ ರವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:311/2012 ದಾಖಲಿಸಿದ್ದು, ದಿನಾಂಕ:13-12-2013 ರಂದು ದೂರುದಾರರ ವಿರುದ್ಧವಾಗಿ ಸಲ್ಲಿಸಿದ ಮನವಿಯನ್ನು ವಜಾಗೊಳಿಸಿರುತ್ತಾರೆ. ನಂತರ, ವಜಾಗೊಳಿಸಿದ ತೀರ್ಪಿನ ವಿರುದ್ಧವಾಗಿ ಹಿರಿಯ ದಿವಾನಿ ನ್ಯಾಯಾಲಯ, ಹುನಗುಂದದಲ್ಲಿ ಪ್ರಕರಣ ಸಂಖ್ಯೆ:27/2014 ಮೇಲ್ಮನವಿಯನ್ನು ದಾಖಲಿಸಿದ್ದು, ಸದರಿ ದಾವೆಯನ್ನು ಮಾನ್ಯ

ನ್ಯಾಯಾಲಯವು ವಜಾ ಮಾಡಿರುತ್ತದೆ. ನಂತರ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇಲ್ಲಿ ಆರ್.ಎಸ್.ಎ ನಂ:10071/2015 ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಇನ್ನೂ ಬಾಕಿ ಇರುತ್ತದೆ.

4. ಹಿರೇಕೊಡಗಲಿ ಗ್ರಾಮ ಪಂಚಾಯಿತಿ ಸದಸ್ಯರು, ವಿದ್ಯುತ್ ಕಂಬ ಹಾಕಲು ದಿನಾಂಕ:22-04-2014 ರಂದು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಪ್ರಕಾರ ಗ್ರಾಮ ಪಂಚಾಯಿತಿಯ ಸ್ಥಳಿಯ ಸದಸ್ಯರ ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ಮಾಡಿ ಹಾತ್ ನಕಾಶೆ ತಯಾರು ಮಾಡಿ ಅದರ ಪ್ರಕಾರ ಆ ಸ್ಥಳದಲ್ಲಿ ವಿದ್ಯುತ್ ಕಂಬ ಹಾಕಲು ಹೆಸ್ಕಾಂ ಇಲಾಖೆಗೆ ದಿನಾಂಕ:03-05-2014 ರಂದು ಪತ್ರ ಬರೆಯಲಾಗಿದೆ.

5. ಶ್ರೀ. ಪ್ರಭುಗೌಡ ನಿಂಗನಗೌಡ ಪಾಟೀಲ ರವರು ಆಸ್ತಿ ಸಂಖ್ಯೆ:90ರ ಮಾಲೀಕರಾಗಿದ್ದು, ದಿನಾಂಕ: 24-07-2012 ರಂದು ಹೊಸ ಮನೆ ನಿರ್ಮಿಸಲು ಅನುಮತಿ ಕೋರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿರುತ್ತಾರೆ. ಗ್ರಾಮ ಪಂಚಾಯಿತಿಯು ದಿನಾಂಕ:28-07-2012 ರಂದು ಠರಾವು ಪಾಸು ಮಾಡಿ ಶ್ರೀ. ಪ್ರಭುಗೌಡ ನಿಂಗನಗೌಡ ಪಾಟೀಲ ರವರಿಗೆ ಹೊಸ ಮನೆ ನಿರ್ಮಿಸಲು ಅನುಮತಿ ನೀಡಿದ್ದು, ಅದರಂತೆ ದಿನಾಂಕ:03-08-2012 ರಂದು ಸದರಿಯವರಿಗೆ ಪರವಾನಿಗೆ ನೀಡಲಾಯಿತು.

6. ಹಿರೇಕೊಡಗಲಿ ಗ್ರಾಮ ಪಂಚಾಯಿತಿಯಿಂದ ನೀಡಲಾಗಿರುವ ಪರವಾನಿಗಿಯಂತೆ ಶ್ರೀ. ಪ್ರಭುಗೌಡ ನಿಂಗನಗೌಡ ಪಾಟೀಲ ರವರು ತಮ್ಮ ಹಳೇ ಮನೆ ಜಾಗದಲ್ಲಿ ಹೊಸ ಮನೆಯನ್ನು ನಿರ್ಮಿಸಿದ್ದು, ಯಾವುದೇ ಅತಿಕ್ರಮಣವಾಗಿರುವುದಿಲ್ಲ ಮತ್ತು ಮನೆ ನಿರ್ಮಿಸುವ ಸಂದರ್ಭದಲ್ಲಿ ಅತಿಕ್ರಮಣದ ಬಗ್ಗೆ ಗ್ರಾಮದಲ್ಲಿ ಯಾರು ಆಕ್ಷೇಪಣೆ ಮಾಡಿರುವುದಿಲ್ಲ. ಮಂಜೂರಾದ ಯೋಜನೆಯ ಪ್ರಕಾರ ಕಟ್ಟಡವನ್ನು ನಿರ್ಮಿಸಲಾಗಿದ್ದು, ನನ್ನಿಂದ ಯಾವುದೇ ಕರ್ತವ್ಯ ನಿರ್ಲಕ್ಷವಾಗಿರುವುದಿಲ್ಲ. ತನಿಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡುವ ಮೊದಲು ನೋಟೀಸ್ ನೀಡಿರುವುದಿಲ್ಲ ಮತ್ತು ಸರಿಯಾಗಿ ಸ್ಥಳ ಪರಿಶೀಲನೆಯನ್ನು ನಡೆಸಿರುವುದಿಲ್ಲ. ಆದ್ದರಿಂದ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯು ಕಾನೂನು ಬಾಹಿರವಾಗಿರುತ್ತದೆ.

7. ಪ್ರಕರಣ ಸಂಖ್ಯೆ:311/2012, 27/2014 ಮತ್ತು ಆರ್.ಎಸ್.ಎ ನಂ:10071/2015 ರಲ್ಲಿ ಹಿರೇಕೊಡಗಲಿ ಗ್ರಾಮ ಪಂಚಾಯಿತಿಯಾಗಲಿ ತಾವಾಗಲಿ ಕಕ್ಷಿಗಾರರಾಗಿರುವುದಿಲ್ಲ ಮತ್ತು ನ್ಯಾಯಾಲಯವು ಅತಿಕ್ರಮಿಸಿಕೊಂಡ ಸ್ಥಳವನ್ನು ತೆರವುಗೊಳಿಸಲು ನಿರ್ದೇಶನ ನೀಡಿರುವುದಿಲ್ಲ. ಆದ್ದರಿಂದ ತಮ್ಮ ವಿರುದ್ಧದ ಆರೋಪವನ್ನು ಮುಕ್ತಗೊಳಿಸಲು ಕೋರಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಲು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ.

8. The charge No.(i) leveled against the DGO is that; the DGO failed to take any action to stop Prabhugouda Patil from encroaching over public road while constructing his house in property No.90 situated at Ward no.1 Mallammana Oni at Hirekodagali Village.

9. The Pw.2 the I.O., stated in his report page No.167 Sl.No. 5, 9, 10 as follows;

**Sl No.:5** ಸದರಿ ಕಂಬವನ್ನು ಕಿತ್ತಿ ಹಾಕಿದ ನಂತರ ಶ್ರೀ. ಪ್ರಭುಗೌಡ ಪಾಟೀಲ ಇವರು ಕಂಬ ಇರುವ ಜಾಗಕ್ಕೆ ಹೊಂದಿಕೊಂಡಂತೆ ಮನೆಯನ್ನು ಕಟ್ಟಿದ್ದು ಅದರ ಮೇಲ್ಗಡೆ ನಿರ್ಮಿಸಿದ ಸಜ್ಜಾವನ್ನು ಸಾರ್ವಜನಿಕ ರಸ್ತೆಯ ಮೇಲೆ ನಿರ್ಮಿಸಿದ್ದು ಸ್ಥಳ ಪರಿಶೀಲನೆಯಿಂದ ಕಂಡುಬರುತ್ತದೆ.

**Sl No.:9** ಪ್ರಭುಗೌಡ ಪಾಟೀಲ ಇವರು ಮನೆಯ ಸಜ್ಜಾವನ್ನು ರಸ್ತೆ ಮೇಲೆ ಹಾಯಿಸಿ ಕಟ್ಟಿದ್ದು ಈ ಕುರಿತು ಕಟ್ಟಡ ಕಟ್ಟುವ ಸಂದರ್ಭದಲ್ಲಿರುವ ಪಿ.ಡಿ.ಓ ರವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇರುವುದು ಕಂಡುಬರುತ್ತದೆ.

**Sl No.:10** ಪ್ರಭುಗೌಡ ಪಾಟೀಲ ಇವರು ತಾವು ಮನೆ ಕಟ್ಟುವುದಕ್ಕಿಂತ ಮುಂಚೆ ಕಟ್ಟಡ ಕಟ್ಟಲು ಪಂಚಯಿತಿಯಿಂದ ನಿಯಮಗಳನ್ವಯ ಅನುಮತಿಯನ್ನು ಪಡೆದಿದ್ದು ಆದರೆ ಸದರಿ ಅವರು ನಿಯಮಗಳನ್ನು ಪಾಲಿಸದೇ ಕಟ್ಟಡವನ್ನು ಕಟ್ಟಿದ್ದು ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ.

10) Considering the evidence of PW.2 along with the proceedings of the gram panchayath Spl. General Body dated 22.08.2015 Ex.P12 page 14-144. Ex.P7, D1 Photographs depicts that the said Prabhugouda Patil constructed the house by projecting the sajja of his house on the public road. Regarding subject mater of removal of old electric pole by the lineman Sri. Khaza Manuddin Munirabad without prior permission, the disciplinary action taken by HESCOM, authority bagalkote as per Ex.P-13 page No. 162-164/. Also the concerned HESCOM authority directed to reinstall the said electrical pole in the said place where the said eolectrical pole removed by the said lineman and the owner of the building Prabhugoudas Ninaganagouda Patil. The said Prabhugoudas NinaganagoudaPatil. The said Prabhugoudas Ninaganagouda Patil filed the O.S.311/2012 in the court of Civil Judge & JMFC, Hungunda against the E.O., HESCOM, Ilakal Branch for the relief of permanent injunction to restrain the HESCOM authority for reinstalling the electrical pole in from of his house. The said suit was dismissed on 13/12/2013. The Ex.P15 Page 194-207 the copy of the judgment and decree of the said suit. In the said judgment at para 12 the respected court observed as follows;

> "ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ಕಾಯ್ದೆಯೆ ನಿಯಮಗಳ ಪ್ರಕಾರ ವಾದಿಯು ದಕ್ಷಿಣ ರಸ್ತೆಯಿಂದ 3 ಅಡಿ ಜಾಗೆಯನ್ನು ಬಿಟ್ಟು ಒಳಭಾಗದಲ್ಲಿ ಕಟ್ಟಡವನ್ನು ಕಟ್ಟಿಕೊಳ್ಳ ಬೇಕಾಗುತ್ತದೆ ಆದರೆ ನಿಪಿ.3 ರಿಂದ 6 ಫೋಟೋಗಳನ್ನು ಪರಿಶೀಲಿಸಲಾಗಿ ನಿಯಮಗಳ ಪ್ರಕಾರ ಯಾವುದೇ 3 ಅಡಿ ಸೆಟ್ ಬ್ಯಾಂಕ್ ಜಾಗೆಯನ್ನು ಬಿಟ್ಟಿರುವುದಿಲ್ಲ. ಮೇಲಾಗಿ ರಸ್ತೆಯ ಅಂಚಿನವರೆಗೆ ಸಂಪೂರ್ಣ ಕಟ್ಟಡವನ್ನು ಕಟ್ಟಿಕೊಂಡಿದ್ದಲ್ಲದೆ 3 ಅಡಿ ರಸ್ತೆಯನ್ನು ಅತಿಕ್ರಮಿಸಿ ಮೇಲ್ಭಾಗದಲ್ಲಿ ಚಿತ್ತನ್ನು ಹಾಖಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ, ವಾದಿಯ ಕಟ್ಟಡವು ಕಾನೂನುಬಾಹಿರವಾಗಿ ಕಟ್ಟಲಾದಂತ ಕಟ್ಟಡವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ."

11) Above said observation depicts that the said Prabhugoudas Ninaganagouda Patil encroached the public road and constructed the house by violating the rules. The Ex.P15 page 210-221 the copy of the judgment and decree of the R.A 27/2014. As per the said document prabhugo8uda Patil challenged the judgment and decree passed on 311/12 civil Judge, Hungund before the Sr. Civil Judge, Hungund/. But the same was dismissed on 11.11.2014. As per Ex.P17 page 251 the said Prabhugouda Patil Preferred the RSA before the Hon'ble High Court of Karnataka, Dharwad Bench in RSA 100171/2015 but pending for admission there is no document to show that

/

whether the said RSA admitted and any interim order passed by Hon'ble High Court of Karnataka.

12. The Ex. D 13 the demand extract in respect of the property of Prabhugoudas Patil in the said document the measurement of the property and also boundary of the property are not mentioned. Ex.P17 page No.228 is the copy of the form No.9 issued by the PDO, grama Panchayath, Hirekodagali in the said document also the measurement of the property No.90 of Hirekodagali village is not mentioned. The Ex.D10 page 329 the application filed by Pabhugouda Patil for seeking the license to construct the house in property No. 90. Asper the said document the application is received by the gram panchayt on 28.07.2012 but there is no endorsement by any officer regarding receiving the same. As per the Ex.D11 the resolution passed on the same day ie.,28.07.2012 to issue license in favour of Prabhugouda Patil to construct the house within the area of 33x21 ft., but in the said resolution boundary of the said property is not mentioned. In the application submitted by Prabhugouda Patil he also mentioned the measurement of his property as 33x21ft. but, there is no document by the side of the DGO whether he confirmed the said measurement after inspected the spot and drawn the mahazar regarding the same. As per Ex.D10 page No. 331 is the hand sketch along with the application of Prabhugoudas Patil in the said hand sketch he has shown the measurement as east-west:33 ft., north-south-21 ft. the Ex.P17 page No.238 is the hand sketch issued by the Secretary gram Panchayath, HIrekodali on 03.05.2014. As per the sid hand sketch the measurement of the proprety of Prabhugoudas Patil shown has 32x20 ft. towards the south 9.ft., road is there. Comparing the said hand sketch along with the measurement written in the application of Prabhugoudas Patil and the hand sketch dated 24.07.2012 produced by Prabhugoudas Patil along with his application and measurement shown in the resolution dated 28.07.2012 and Ex.D12 copy of license depicts that the DGO without inspected the spot and measure the property of Prabhugoudas Patil he has issued the license to Prabhugoudas Patil/ As per Ex. D12 license copy, permission granted to construct the house after 5 ft., from the public road and leave 2 ft., set back.

13. Considering the Ex.P-12 page 238 hand sketch issued by the Secretary of the Grama Panchayath, Hirekodagali dated 03.05.2014 and above said photographs it clearly reveals that the said Prabhugouda Patil has not constructed the building as per license issued by the grama panchayath. Considering the above said all facts and circumstances, it clear that the said Prabhugouda Patil has not constructed the house in accordance with the license issued by the grama panchayath and also he has projected his house sajja on public road. This fact depicts that the DGO has not monitored each and every stage of construction of house of Prabhugouda Patil and never stopped Prabhugouda Patil from encroaching public road. The said act of the DGO shows the dereliction of duty and misconduct. Thereby the disciplinary authority succeeded to prove the charge-(i) leveled against the DGO.

14. The charge-(ii) leveled against the DGO is that; he has failed to take any action to remove the said encroachment by Sri. Prabhugouda Patil after completion of the said construction. The discussions and reasons stated above in respect of the charge-(i) leveled against the DGO it is clear that Prabhugouda Patil encroached the public road at the time of construction of his house and also violated the condition prescribed in the license. Further the DGO as a PDO of the said grama panchayath, failed to monitoring each and every stage of construction of house of said Prabhugouda Patil and also failed to stop illegal construction. Further the DGO submitted in his written statement as well as deposed in his evidence that the said also not constructed the house by violating the rules and license issued by DGO. This fact clearly reveals that even though Civil Judge observed in his judgment as stated above regarding the said Prabhugouda Patil encroached the public road at the time of construction of his house and violated the license conditions and rules, the DGO has not taken any action. But, the DGO defended the DGO has not taken any action. But, the DGO defended himself against the said judgment without inspected the spot and scrutinized the documents like the license issued by him as well as hand sketch issued by the concerned gram panchayath as the said Prabhugoudas Patil has not encroached public road and not violated any rules at the time of construction of his building. The PW.2 clearly stated in his report that the said Prabhugoudas Patil encroached the public road and the DGO has not taken any action against the owner of the said building for removal of the said encroachment. These facts are all clearly reveal that the DGO failed to take any action to remove the said encroachment made by Prabhugoudas Patil even after completion of the said construction. The said act of the DGO itself shows misconduct and dereliction of duty. Thereby the disciplinary authority succeeded to prove the charge-(ii) leveled against the DGO.

15) The above said discussion and reasons the disciplinary authority swucceeded to prove the following charges against the DGO:

(i) Failed to take any action to stop Shri. Prabhugoudas Patil from encroaching over the public road while construction his house in property NO.90, situated at ward no.1, Mallammana oni at Hirekodagli Village, Hunagund Taluk, Bagalkot District and

(ii) Failed to take any action to remove the said encroachment made by Sri. Prabhugoudas Patil even after completion of the said construction.

16) In the above said facts and circumstances, the charges-(i) & (ii) leveled against the DGO are proved. Hence, this report is submitted to Hon'ble Upalokayukta for further action.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದೆ. ಆಪಾದಿತರು ತಮ್ಮ ಹೇಳಿಕೆಯಲ್ಲಿ ತನಿಖಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡುವ

ಸಂದರ್ಭದಲ್ಲಿ ಸರಿಯಾಗಿ ಸ್ಥಳ ಪರಿಶೀಲನೆ ನಡೆಸಿರುವುದಿಲ್ಲ ಮತ್ತು ಅವರ ವರದಿ ಕಾನೂನು ಬಾಹಿರ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ವಿಚಾರಣೆಯ ಸಂದರ್ಭದಲ್ಲಿ ತನಿಖಾಧಿಕಾರಿಯವರು ನೀಡಿರುವ ಸಾಕ್ಷಿ ಅನುಸಾರ ಅಪಾದಿತರು ಶ್ರೀ. ಪ್ರಭುಗೌಡ ಲಿಂಗನಗೌಡ ಪಾಟೀಲ್ ರವರಿಗೆ ಮನೆ ನಿರ್ಮಿಸಲು ಲೈಸನ್ಸ್ ನೀಡಿದ್ದು ಶ್ರೀ. ಪ್ರಭುಗೌಡ ಲಿಂಗನಗೌಡ ಪಾಟೀಲ್ ರವರು ಮನೆಯ ಸಜ್ಜಾವನ್ನು ಸಾರ್ವಜನಿಕ ರಸ್ತೆಯ ಮೇಲೆ ವಿಸ್ತರಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಮತ್ತು ಆಪಾದಿತರು ಈ ಒತ್ತುವರಿಯನ್ನು ತಡೆಯಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಆಪಾದಿತರು ತಮ್ಮ ಹೇಳಿಕೆಯಲ್ಲಿ ಶ್ರೀ. ಪಾಟೀಲ್‌ರವರು ಕಟ್ಟಡವನ್ನು ಮಂಜೂರಾತಿ ನಕ್ಷೆಯ ಅನುಸಾರವೇ ನಿರ್ಮಿಸಲಾಗಿದೆ ಎಂದು ತಮ್ಮ ವಾದದಲ್ಲಿ ಸಮರ್ಥಿಸಿಕೊಂಡಿರುತ್ತಾರೆ. ಆದರೆ ವಾಸ್ತವವಾಗಿ ಸ್ಥಳ ತನಿಖಾ ವರದಿಯ ಅನುಸಾರ ಶ್ರೀ. ಪಾಟೀಲ್‌ರವರು ಮಂಜೂರಾತಿ ನಕ್ಷೆಯ ಉಲ್ಲಂಘನೆ ಮಾಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಶಿರಗುಪ್ಪಿ ಜಿ.ಎಸ್, ರವರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆಯನ್ನು ತಿರಸ್ಕರಿಸಿದೆ.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರಡಿ ನಿರ್ದಿಷ್ಟಪಡಿಸಿದಂತೆ **"ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ ಸರ್ಕಾರವು ವಿಚಾರಣಾ ವರದಿಯನ್ನು ಅಂಗೀಕರಿಸಿದೆ. ಮತ್ತು ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರಡಿ ನಿರ್ದಿಷ್ಟಪಡಿಸಿದಂತೆ **"ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 240 ಗ್ರಾಪಂಕಾ 2016 ಬೆಂಗಳೂರು, ದಿನಾಂಕ:24-09-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಡಗಲಿ ಗ್ರಾಮ ಪಂಚಾಯತ್, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ರಡಿ ನಿರ್ದಿಷ್ಟಪಡಿಸಿದಂತೆ **"ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayan Dep.
24/9/19
(ಡಿ.ಜಿ. ನಾರಾಯಣ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು. 24/9/19

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಾಗಲಕೋಟೆ ಜಿಲ್ಲೆ
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
6. ಶ್ರೀ ಶಿರಗುಪ್ಪಿ ಜಿ.ಎಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಡಗಲಿ ಗ್ರಾಮ ಪಂಚಾಯತ್, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.